# ‘ಸಾಹಸ ಸಿನಿಮಾದ ಕನಸಿನಲ್ಲಿರುವೆ

**ಸಂಪ್ರೀತಿ ಆಳ್ವಾ**
ಕಲರ್ಸ್ ಕನ್ನಡದ
‘ಶಾಂತಂ ಪಾಪಂ’ ನಟಿ



◆ **ಇದು ಇವೆಂಟ್ ಪರ್ಫಾರ್ಮ್ ರೀತಿ ಇದೆ ಎಂದು ಅನ್ನಿಸುವುದಿಲ್ಲವೇ?**

ಒಂದೊಂದು ಎಪಿಸೋಡ್ ಒಂದೊಂದು ಕಥೆ ಹೊಂದಿರುತ್ತದೆ. ‘ಶಾಂತಂ ಪಾಪಂ’ ಕ್ರೈಂ ಸಂಬಂಧಿ ಕಥಾ ಹಂದರದಲ್ಲಿ ಸಾಗುತ್ತದೆ. ಬೇರೆ ಬೇರೆ ಕಲಾವಿದರ ತಂಡದಿಂದ ರೂಪಿಸಲಾಗುತ್ತಿದೆ. ಹಿಂದಿನ ಸಂಚಿಕೆಯಿಂದಲೇ ಪಾತ್ರವನ್ನು ಮಾಡುತ್ತಿದ್ದೇನೆ. ಈ ಬಾರಿ ಪ್ರಮುಖ ಪಾತ್ರಗಳನ್ನು ನಿರ್ವಹಿಸುತ್ತಿದ್ದೇನೆ. ಸೀರಿಯಲ್ ಕಥೆಗಳು ಸುದೀರ್ಘ ಆಗುತ್ತವೆ. ಹಾಗೆಯೇ ಮಾಡುತ್ತಾರೆ. ಇದು ಹಾಗಲ್ಲ. ಮೂರು ನಾಲ್ಕು ಕಂತುಗಳಲ್ಲಿ ಕಥೆಯನ್ನು ಮುಗಿಸುತ್ತಾರೆ. ಒಂದು ರೀತಿಯಲ್ಲಿ ನಿರ್ಮಾಣ ಸಿನಿಮಾ ಮಾಡಿದಂತೆ ಅನ್ನಿಸುತ್ತೆ. ಅಷ್ಟೇ ಅದ್ದೂರಿಯಾಗಿರುತ್ತದೆ. ಕಥೆಗೆ ವೇಗ ಇರುತ್ತದೆ. ತಿರುವುಗಳೂ ಗೊತ್ತಾಗುವುದಿಲ್ಲ. ಒಂದು ಕಂತಿನಲ್ಲಿ ಹಲವು ದೃಶ್ಯಗಳು ಬರುತ್ತವೆ. ಧಾರಾವಾಹಿಯಲ್ಲಿ ಒಂದು ಪಾತ್ರವನ್ನು ಆಳವಾಗಿ ಆವಿಷ್ಕಾರ ಮಾಡುತ್ತಾರೆ. ಅದನ್ನು ವಿಸ್ತಾರವಾದ ಚೌಕಟ್ಟಿನಲ್ಲಿ ಹರವುತ್ತಾರೆ. ಆದರೆ ಇಲ್ಲಿ ವಿಷಯ ಕೇಂದ್ರಿತವಾಗಿದ್ದು ಸಂದರ್ಭಕ್ಕೆ ಸೀಮಿತವಾಗಿ ಇರುತ್ತದೆ.

◆ **ನಟನೆಯ ಚಿಂತನೆ ನಿಮ್ಮಲ್ಲಿ ಒಡಮೂಡಿದ ಬಗೆ ಹೇಗೆ?**

ಚಿಕ್ಕ ವಯಸ್ಸಿನಿಂದಲೂ ಅಭಿನಯದ ಪ್ಯಾಶನ್ ಇತ್ತು. ಶಾಲೆಯ ದಿನಗಳಲ್ಲೂ ರಂಗ ಚಟುವಟಿಕೆ ಇದ್ದರೆ ಮಾಡುತ್ತಿದ್ದೆ. ನಮ್ಮ ಮನೆಯಲ್ಲಿ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿದ್ದರು. ಓದು ಮುಗಿದ ನಂತರ ಕಿರುಚಿತ್ರಗಳನ್ನು ಮಾಡುತ್ತಾ ಅಭಿನಯಕ್ಕೆ ಒಲಿದು ಬಂದೆ. ನಾನು ಹೈಸ್ಕೂಲಿನಲ್ಲಿ ಇದ್ದಾಗ ‘ಪುಟ್ಟಣ್ಣ ಕಣಗಾಲ್ ಫಿಲ್ಮ್ ಇನ್ಸ್ಟಿಟ್ಯೂಟ್’ ಕಡೆಯವರು ಮಂಗಳೂರಿನಲ್ಲಿ ಬೇಸಿಗೆ ಶಿಬಿರ ಮಾಡಿದ್ದರು, ಅದರಲ್ಲಿ ಭಾಗವಹಿಸಿದ್ದೆ. ಬಿಟ್ಟರೆ ಕನ್ನಡಿ ಮುಂದೆ ನಿಂತು ಸ್ವಯಂ ಅಭ್ಯಾಸ ಮಾಡಿದೆ. ಇಷ್ಟವಾದ ದೃಶ್ಯಗಳನ್ನು ರೆಕಾರ್ಡ್ ಮಾಡಿ ನೋಡುತ್ತಿದ್ದೆ. ಆ ಅನುಭವದಿಂದಲೇ ಈಗ ಕಲಿಯುತ್ತಿದ್ದೇನೆ.

◆ **ನಿಮ್ಮ ಬಾಲ್ಯದ ದಿನಗಳು ಹೇಗಿದ್ದವು?**

ಹುಟ್ಟಿದ್ದು ಬೆಳೆದಿದ್ದು ಮಂಗಳೂರು. ಬಾಲ್ಯದಲ್ಲಿ ಅಥ್ಲೀಟ್, ನನ್ನ 21ನೇ ವರ್ಷದ ತನಕ ವೃತ್ತಿಪರವಾಗಿಯೇ ಆಡ್ತಾ ಇದ್ದೆ. ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿಯೂ ಆಡಿದ್ದೇನೆ. ನಾನು ಡಿಗ್ರಿ ಮಾಡುವಾಗ ನಟನೆಯತ್ತ ಆಸಕ್ತಿ ಬಂತು. ಆಗಲೇ ಡಾನ್ಸ್ ಅಭ್ಯಾಸ ಮಾಡಿದೆ. ಎಂಬಿಎ ಮಾಡಲು ಬೆಂಗಳೂರಿಗೆ ಬಂದೆ. ಕೆಲ ವರ್ಷ ಕಾರ್ಪೊರೇಟ್ ಕಂಪನಿಯಲ್ಲಿ ಕೆಲಸವನ್ನೂ ಮಾಡಿದೆ. ನಂತರವೇ ಅಭಿನಯ ತನ್ನತ್ತ ನನ್ನನ್ನು ಆಕರ್ಷಿಸಿತು. ಲಾಕ್‌ಡೌನ್ ಅವಧಿಯಲ್ಲಿ ಇದನ್ನೇ ಪೂರ್ಣಾವಧಿ ಮಾಡಬೇಕು ಎಂದು ನಿರ್ಧಾರ ಮಾಡಿದೆ.

◆ **ನಿಮ್ಮ ಧ್ವನಿಯನ್ನು ದುಡಿಸುವ ಯತ್ನ ಮಾಡಲಿಲ್ಲವೇ?**

ಬೇರೆ ಕಲಾವಿದರಿಗೆ ಕಂಠದಾನ ಮಾಡಿಲ್ಲ. ನನ್ನ ಪಾತ್ರಗಳಿಗೆ ನನ್ನದೇ ಧ್ವನಿ ಡಬ್ ಮಾಡಿದ್ದೇನೆ. ಚಿಕ್ಕಂದಿನಲ್ಲಿ ಅಮ್ಮನ ಮೂಲಕ ಆಕಾಶವಾಣಿಯಲ್ಲಿ ಯಕ್ಷಗಾನ ಕಾರ್ಯಕ್ರಮ ನೀಡಲು ಅವಕಾಶ ಸಿಗುತ್ತಿದ್ದವು. ಭಾಗವತಿಕೆ ಮಾಡುತ್ತಿದ್ದೆ.

◆ **ಅಥ್ಲೀಟ್ ಆಗುವ ಅವಕಾಶ ತಪ್ಪಿದೆ ಎಂದು ಅನಿಸಿದೆಯಾ?**

ಅಥ್ಲೆಟಿಕ್ಸ್ ಕ್ಷೇತ್ರವನ್ನು ತುಂಬ ಗಂಭೀರವಾಗಿ ಪರಿಗಣಿಸಿದ್ದೆ. ತರಬೇತಿ ಕೂಡ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಸರಿ ಸಮಾನವಾಗುವಂತೆ ಕೊಡ್ತಾ ಇದ್ದರು. ಅದೇ ರೀತಿಯ ಗುರಿ ಇತ್ತು. ಅರ್ಧ ವರ್ಷದಷ್ಟು ಸಮಯ ತರಬೇತಿ ನೀಡಿದರೆ, ಸ್ಪರ್ಧೆಗೆ ಅರ್ಧ ವರ್ಷ ಕೊಡಬೇಕಿತ್ತು. ಸ್ಪರ್ಧೆಯ ವೇಳೆ ಏನಾದರೂ ತೊಂದರೆ ಆದರೆ, ಐದಾರು ತಿಂಗಳು ಆರೈಕೆಯಾಗಬೇಕು. ಇಂತಹ ಒಂದೆರಡು ಘಟನೆ ನಡೆದರೆ ತುಂಬ ಕಷ್ಟ. ಅದು ನಮ್ಮ ಆತ್ಮವಿಶ್ವಾಸವನ್ನೇ ಕುಗ್ಗಿಸುತ್ತದೆ ಎಂದು ನನ್ನ 21ನೇ ವರ್ಷದಲ್ಲಿ ಅನ್ನಿಸಿದ್ದರಿಂದ ಇದು ಬೇಡ ಎಂದು ನಿರ್ಧರಿಸಿದೆ. ಆಗ ಶಿಕ್ಷಣದತ್ತ ಹೆಚ್ಚು ಗಮನ ನೀಡಬೇಕೆಂದು ಯೋಚಿಸಿದೆ. ನಮ್ಮ ಪೋಷಕರು ಯೋಚಿಸಿ ನಿರ್ಧರಿಸು ಎಂದರು. ಪ್ರಾಯೋಗಿಕ ಕ್ರೀಡೆ ಕಷ್ಟ ಎಂದು ಅದನ್ನು ಬಿಟ್ಟೆ. ತರಬೇತಿ ಚೆನ್ನಾಗಿದ್ದರೂ ಅವಕಾಶಗಳು ಸೀಮಿತ. ಹಾಗಾಗಿ ಅದೊಂದೇ ಕ್ಷೇತ್ರದಲ್ಲಿ ಸ್ಟ್ರಕ್ ಆಗಬಾರದು ಎಂದೆನಿಸಿತು.

◆ **ಕಿರುತೆರೆ, ಬೆಳ್ಳಿತೆರೆ ಇದರಲ್ಲಿ ನಿಮ್ಮ ಮೊದಲ ಆಯ್ಕೆ ಯಾವುದು?**

ನನಗೆ ಸೂಕ್ತ ಅನ್ನಿಸುವುದು ಬೆಳ್ಳಿತೆರೆ. ಆದರೆ ಸವಾಲು ಎಂದೆನಿಸುವುದು ಕಿರುತೆರೆಯಲ್ಲಿ. ಸದ್ಯ ಇಲ್ಲೇ ಇದ್ದೇನೆ, ಮುಂದೆ ನೋಡಬೇಕು. ನನಗೆ ಆ್ಯಕ್ಷನ್ ಸಿನಿಮಾ ಮಾಡಬೇಕು ಎನ್ನುವ ಆಸೆ ಇದೆ. ಅದರಲ್ಲೂ ನಾಯಕಿ ಪ್ರಧಾನ ಪಾತ್ರ ನಿರ್ವಹಿಸುವ ಕನಸು ನನ್ನದು. ಮೊದಲಿಂದ ನನಗೆ ಫಿಟ್‌ನೆಸ್ ತರಬೇತಿ ಇದೆ. ಸಮರ ಕಲೆಯ ಪರಿಚಯವೂ ಇದೆ ಹಾಗಾಗಿ ಅದು ಚೆನ್ನಾಗಿ ಆಗುತ್ತೆ ಎನ್ನುವ ಕುತೂಹಲ.

■ **ರಾಘವೇಂದ್ರ ಕೆ.**